INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,89-101
Peer -Reviewed, Refereed Journal

# ಕರ್ನಾಟಕದಲ್ಲಿ ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ಪ್ರಾತಿನಿಧ್ಯ, ನಾಯಕತ್ವದ ಸ್ವರೂಪಗಳು ಮತ್ತು ಒಳಮೀಸಲಾತಿಯ ಸವಾಲುಗಳು: ಒಂದು ವಿಸ್ತೃತ ಅಧ್ಯಯನ

**ಕುಮಾರನಾಯ್ಕ.**[1]

**ಸಾರಾಂಶ:** 2008 ರಿಂದ 2026ರವರೆಗಿನ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಸಂದರ್ಭದಲ್ಲಿ ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ಪ್ರಾತಿನಿಧ್ಯ ಮತ್ತು ನಾಯಕತ್ವದಲ್ಲಿ ಕೆಲವು ಬದಲಾವಣೆಗಳು ಕಂಡುಬಂದಿರುತ್ತವೆ. ಈ ಅವಧಿಯಲ್ಲಿ ಸಮುದಾಯದ ರಾಜಕೀಯ ಪಾಲ್ಗೊಳ್ಳುವಿಕೆ ರಾಜ್ಯ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ವಿಸ್ತಾರವಾಗುವ ಮೂಲಕ ಈ ಸಮುದಾಯದ ಜನನಾಯಕರಾದ ಪಿ.ರಾಜೀವ್, ಡಾ.ಉಮೇಶ್ ಜಾಧವ್, ಪ್ರಭು ಚವಾಣ್ ಅವರು ತಮ್ಮ ಸಾಮಾಜಿಕ ಹಿನ್ನೆಲೆ, ಶಿಕ್ಷಣ ಮತ್ತು ರಾಜಕೀಯ ಸಂಘಟನೆಗಳಲ್ಲಿ ಪಾತ್ರದಿಂದ ಸಮುದಾಯದ ಪ್ರಾತಿನಿಧ್ಯವನ್ನು ಹೆಚ್ಚು ಬಲಪಡಿಸಿದ್ದಾರೆ. ಜಾತಿ ಅಸ್ಮಿತೆ, ಪ್ರಾದೇಶಿಕ ರಾಜಕೀಯ, ಸಮಾಜೋ–ಆರ್ಥಿಕ ಪರಿಸ್ಥಿತಿಗಳು ಹಾಗೂ ಪಕ್ಷಗಳ ಸಂಸ್ಥಾತ್ಮಕ ಬೆಂಬಲ ಈ ನಾಯಕತ್ವದ ಬೆಳವಣಿಗೆಯಲ್ಲಿ ಪ್ರಮುಖ ಅಂಶಗಳಾಗಿವೆ. ಹನ್ನಾ ಪಿಟ್ಕಿನ್ ಅವರ ವರ್ಣನಾತ್ಮಕ ಪ್ರಾತಿನಿಧ್ಯ ಸಿದ್ಧಾಂತದ ಪ್ರಕಾರ, ಸಂಖ್ಯಾತ್ಮಕವಾಗಿ ಹೆಚ್ಚಿದ ಪ್ರಾತಿನಿಧ್ಯವೂ ಸಾಧನೆಯಾಗಿದ್ದರೂ, ಮೂಲಭೂತ ಸಮಸ್ಯೆಗಳಿಗೆ ಪರಿಣಾಮಕಾರಿ ನೀತಿಗಳ ರೂಪಣೆಯಲ್ಲಿ ರಾಜಕೀಯ ಸವಾಲುಗಳು ಮತ್ತು ಪಕ್ಷ ಶಿಸ್ತುಗಳು ಅಡೆತಡೆಗಳಾಗಿ ಉಳಿದಿವೆ. 2023–2026ರ ಈ ಅವಧಿಯೊಳಗಿನ ಒಳಮೀಸಲಾತಿ ಚರ್ಚೆಗಳು, ಸಂಪನ್ಮೂಲ ಹಂಚಿಕೆ ಸಂಬಂಧ ಭಿನ್ನಾಭಿಪ್ರಾಯಗಳು ಮತ್ತು ರಾಜಕೀಯ ಧ್ರುವೀಕರಣವು ಬಂಜಾರ ಸಮುದಾಯದ ರಾಜಕೀಯ ಸ್ಥಾನಮಾನ ಮತ್ತು ನಾಯಕತ್ವದ ಮೇಲೆ ಗಂಭೀರ ಪರಿಣಾಮ ಬೀರಿವೆ. ಈ ಒಳಮೀಸಲಾತಿ ಪ್ರಶ್ನೆಯನ್ನು ಕೇವಲ ಮೀಸಲಾತಿ ಹಂಚಿಕೆ ಮಾತ್ರವಲ್ಲದೆ, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಪ್ರಾತಿನಿಧ್ಯದ ಗುಣಮಟ್ಟಕ್ಕೆ ಸಂಬಂಧಿಸಿದ ವಿಶಾಲ ಸಮಾಜೋ–ಪ್ರಶ್ನೆಯಾಗಿ ಗುರುತಿಸಲಾಗಿರುತ್ತದೆ.

**ಪ್ರಧಾನ ಪದಗಳು:** ಬಂಜಾರ (ಲಂಬಾಣಿ) ಸಮುದಾಯ, ರಾಜಕೀಯ ಪ್ರಾತಿನಿಧ್ಯ, ನಾಯಕತ್ವದ ವಿಕಸನ, ಪರಿಶಿಷ್ಟ ಜಾತಿ, ಒಳಮೀಸಲಾತಿ, ವರ್ಣನಾತ್ಮಕ ಪ್ರಾತಿನಿಧ್ಯ, ವಾಸ್ತವಿಕ ಪ್ರಾತಿನಿಧ್ಯ, ಜಾತಿ ಅಸ್ಮಿತೆ, ರಾಜಕೀಯ ಸಬಲೀಕರಣ, ಸಾಮಾಜಿಕ ನ್ಯಾಯ

---

[1]**ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರು.**

**ಪೀಠಿಕೆ:** 2008 ರಿಂದ 2018ರವರೆಗಿನ ಕರ್ನಾಟಕದ ರಾಜಕೀಯ ಇತಿಹಾಸವು ಮಹತ್ವದ ಪುನರ್‌ರಚನೆ ಮತ್ತು ಅಧಿಕಾರದ ಮರುಸಂಯೋಜನೆಯ ದಶಕವಾಗಿತ್ತು. 2008ರ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು ದಕ್ಷಿಣ ಭಾರತದ ಮೊದಲ ಸ್ವತಂತ್ರ ಬಹುಮತ ಸರ್ಕಾರವನ್ನು ಸ್ಥಾಪಿಸುವ ಮೂಲಕ ರಾಜ್ಯದ ರಾಜಕೀಯ ದೃಶ್ಯವನು ಬದಲಾಯಿಸಿತು. ಈ ಬೆಳವಣಿಗೆಯು ಬಹುದಶಕಗಳಿಂದ ಕಾಂಗ್ರೆಸ್ ಮತ್ತು ಜೆಡಿಎಸ್ ಆಧಾರಿತ ರಾಜಕೀಯ ಸ್ಪರ್ಧೆಯ ಸ್ವರೂಪವನ್ನು ಪರಿವರ್ತಿಸಿ, ಬಹುಪಕ್ಷೀಯ ಸ್ಪರ್ಧೆ, ಚುನಾವಣಾ ಮೈತ್ರಿಗಳ ಮರುಸಂಯೋಜನೆ, ಸೈದ್ಧಾಂತಿಕ ದ್ರವ್ಯತೆ, ಬಣ ರಾಜಕೀಯ ಮತ್ತು ವ್ಯಕ್ತಿ ಕೇಂದ್ರಿತ ನಾಯಕತ್ವವನ್ನು ಪ್ರಬಲಗೊಳಿಸಿತು. ಜಾತಿ ಸಮೀಕರಣಗಳ ಮರುರಚನೆ ಮತ್ತು ಹಿಂದುಳಿದ ಸಮುದಾಯಗಳ ಸಬಲೀಕರಣ ಈ ರಾಜಕೀಯ ಪರಿವರ್ತನೆಯ ಅಂಶಗಳಾಗಿರುತ್ತವೆ. ಈ ಅವಧಿಯಲ್ಲಿ ಪಕ್ಷಾಂತರಗಳು, ಸಮ್ಮಿಶ್ರ ಸರ್ಕಾರಗಳ ಅಸ್ಥಿರತೆ ಮತ್ತು ನಾಯಕತ್ವದ ಬಿಕ್ಕಟ್ಟುಗಳು ಸಾಮಾನ್ಯವಾಗಿದ್ದು, ರಾಜಕೀಯ ಪಕ್ಷಗಳ ಸಾಂಸ್ಥಿಕ ಬಲಕ್ಕಿಂತ ವ್ಯಕ್ತಿಗತ ನಾಯಕತ್ವ, ಸ್ಥಳೀಯ ಸಾಮಾಜಿಕ ಪ್ರಭಾವ, ಜಾತಿ ಅಸ್ಮಿತೆ ಮತ್ತು ಮತದಾರರೊಂದಿಗೆ ನೇರ ಸಂಪರ್ಕವೇ ಚುನಾವಣಾ ಯಶಸ್ಸಿನ ಮುಖ್ಯ ಕಾರಣಗಳಾಗಿ ಪರಿಣಮಿಸಿದರು. ರಾಜಕೀಯ ನ್ಯಾಯಸಮ್ಮತತೆ ಕೇವಲ ಪಕ್ಷದ ಸಿದ್ಧಾಂತಗಳ ಮೇಲೆ ಅಲ್ಲ, ನಾಯಕನ ವೈಯಕ್ತಿಕ ವಿಶ್ವಾಸಾರ್ಹತೆ ಮತ್ತು ಸಾಮಾಜಿಕ ಬಂಡವಾಳದ ಮೇಲೂ ಅವಲಂಬಿತವಾಯಿತು. ಈ ರಾಜಕೀಯ ಸನ್ನಿವೇಶದಲ್ಲಿ, ಐತಿಹಾಸಿಕವಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಅಂಚಿನಲ್ಲಿದ್ದ ಬಂಜಾರ (ಲಂಬಾಣಿ) ಸಮುದಾಯವು ತನ್ನ ರಾಜಕೀಯ ಅಸ್ತಿತ್ವವನ್ನು ಪುನರ್ ನಿರ್ಮಿಸಲು ಪ್ರಾರಂಭಿಸಿತು. ಸಾಂಪ್ರದಾಯಿಕವಾಗಿ ಅಲೆಮಾರಿ ವ್ಯಾಪಾರದಲ್ಲಿ ತೊಡಗಿದ್ದ ಈ ಸಮುದಾಯವು ಕಾಲಕ್ರಮೇಣ ತಾಂಡಾಗಳಲ್ಲಿ ನೆಲೆಸಿದರೂ, ಶಿಕ್ಷಣ, ಭೂಸ್ವಾಮ್ಯ, ಆಡಳಿತಾತ್ಮಕ ಅವಕಾಶಗಳ ಕೊರತೆ ಮತ್ತು ಸರ್ಕಾರಿ ಯೋಜನೆಗಳ ಬಗ್ಗೆ ಸೀಮಿತ ಅರಿವುರಿಂದ ರಾಜಕೀಯವಾಗಿ ಹಿಂದುಳಿದಿತ್ತು. ಆದರೂ, ಸಾಂವಿಧಾನಾತ್ಮಕ ಮೀಸಲಾತಿ, ಪಂಚಾಯತ್ ರಾಜ್ ವಿಕೇಂದ್ರೀಕರಣ ಮತ್ತು ಪರಿಶಿಷ್ಟ ಜಾತಿಗಳಿಗೆ ಕಲ್ಪಿಸಲಾದ ರಾಜಕೀಯ ಅವಕಾಶಗಳು, ವಿವಿಧ ಪಕ್ಷಗಳ ಮತಾಧಾರ ವಿಸ್ತರಣೆಯ ತಂತ್ರಗಳು ಈ ಸಮುದಾಯಕ್ಕೆ ಹೊಸ ರಾಜಕೀಯ ಅವಕಾಶಗಳನ್ನು ಒದಗಿಸಿತು. 2008–2018ರ ಅವಧಿಯಲ್ಲಿ ಪಿ.ರಾಜೀವ್, ಡಾ.ಉಮೇಶ್ ಜಾಧವ್, ಪ್ರಭು ಚವಾಣ್, ರುದ್ರಪ್ಪ ಲಮಾಣಿ, ಪಿ.ಟಿ.ಪರಮೇಶ್ವರ ನಾಯಕ್, ಡಾ.ಅವಿನಾಶ್ ಯು.ಜಾಧವ್ ಮತ್ತು ಶಾರದಾಪುರಣ್ ನಾಯಕ್ ಅವರು ವಿವಿಧ ರಾಜಕೀಯ ಪಕ್ಷಗಳಲ್ಲಿ ಉಮೇದುವಾರಿಕೆಯನ್ನು ಪಡೆದು ವಿಧಾನಸಭೆ ಮತ್ತು ಲೋಕಸಭೆಗೆ ಪ್ರವೇಶಿಸುವ ಮೂಲಕ ಪ್ರಭಾವಶಾಲಿಯಾಗಿ ಹೊರಹೊಮ್ಮಿದರು. ಇವರ ನಾಯಕತ್ವದಲ್ಲಿ ಜಾತಿ ಅಸ್ಮಿತೆ, ಶಿಕ್ಷಣ, ವೃತ್ತಿಪರ ಅನುಭವ, ಸಂಘಟನೆಗಳ ಬೆಂಬಲ ಮತ್ತು ಪಕ್ಷದ ಸಾಂಸ್ಥಿಕ ಅವಕಾಶಗಳು ಪ್ರಮುಖ ಪಾತ್ರ ವಹಿಸಿವೆ. ಬಂಜಾರ ಸಮುದಾಯದ ರಾಜಕೀಯ ಪ್ರಾತಿನಿಧ್ಯವನ್ನು ಕೇವಲ ಸಂಖ್ಯಾತ್ಮಕ ಯಶಸ್ಸಿನ ದೃಷ್ಟಿಯಿಂದ ಮಾತ್ರವಲ್ಲದೆ, ಹನ್ನಾ ಪಿಟ್ಕಿನ್ ಅವರ 'ವರ್ಣನಾತ್ಮಕ' ಮತ್ತು 'ವಾಸ್ತವಿಕ' ಪ್ರಾತಿನಿಧ್ಯಗಳ ಸೈದ್ಧಾಂತಿಕ ಚೌಕಟ್ಟಿನಡಿ ವಿಶ್ಲೇಷಿಸುತ್ತದೆ. 2023–2026ರ ಈ ಅವಧಿಯಲ್ಲಿ ತೀವ್ರ ಚರ್ಚೆಗೆ

ಒಳಗಾದ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಪ್ರಶ್ನೆಯು ಬಂಜಾರ ಸಮುದಾಯದ ರಾಜಕೀಯ ಸ್ಥಾನಮಾನ, ನಾಯಕತ್ವ ಮತ್ತು ಪ್ರಾತಿನಿಧ್ಯ ಗುಣಮಟ್ಟದ ಮೇಲೆ ಪರಿಣಾಮ ಬೀರುವುದನ್ನು ಈ ಅಧ್ಯಯನ ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತದೆ.

ಕರ್ನಾಟಕದ ಜಾತಿ–ಆಧಾರಿತ ಸಾಮಾಜಿಕ ಹಾಗೂ ಪ್ರಾದೇಶಿಕ ರಾಜಕೀಯದಲ್ಲಿ, ಬಂಜಾರ ಸಮುದಾಯದಂತಹ ಹಿಂದುಳಿದ ಸಮುದಾಯಗಳಿಗೆ ದೊರೆಯುವ ಪ್ರಾತಿನಿಧ್ಯವು ಸಾಮಾಜಿಕ ಮಾನ್ಯತೆ ಮತ್ತು ರಾಜಕೀಯ ಗುರುತಿನ ಸಂಕೇತವಾಗಿದೆ. ಆದರೆ, ಶಾಸನಸಭೆಯಲ್ಲಿರುವ ಪ್ರತಿನಿಧಿಗಳು ತಮ್ಮ ಸಮುದಾಯದ ಹಿತಾಸಕ್ತಿಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಪಕ್ಷದ ಶಿಸ್ತು, ಆಡಳಿತಾತ್ಮಕ ನಿರ್ಬಂಧಗಳು ಮತ್ತು ಅಧಿಕಾರದ ಕೇಂದ್ರೀಕರಣವನ್ನು ಎದುರಿಸಬೇಕಾಗುತ್ತದೆ. ನಾಯಕ–ಕೇಂದ್ರಿತ ಪ್ರಜಾಪ್ರಭುತ್ವದ ದೃಷ್ಟಿಕೋನದಡಿ, ಆಂಡ್ರಾಸ್ ಕೊರೊಸೆನ್ಯಿಯವರ ಸಿದ್ಧಾಂತವು 2008–2018ರ ಕರ್ನಾಟಕದ ರಾಜಕೀಯ ಬೆಳವಣಿಗೆಯಲ್ಲಿನ ವ್ಯಕ್ತಿ ನಾಯಕತ್ವ, ಸಂಘಟನಾ ಸಾಮರ್ಥ್ಯ ಮತ್ತು ಜನಸಂಪರ್ಕದ ಮಹತ್ವವನ್ನು ವಿವರಿಸುತ್ತದೆ. ಬಂಜಾರ ನಾಯಕರು ತಮ್ಮ ವೈಯಕ್ತಿಕ ಬಂಡವಾಳ ಮತ್ತು ಸಾಮಾಜಿಕ ನೆಲೆಯನ್ನು ಬಳಸಿಕೊಂಡು ರಾಜಕೀಯದಲ್ಲಿ ಸ್ಥಾನಮಾನ ಗಳಿಸಿದರು.

ಸಬಾಲ್ಟರ್ನ್ ರಾಜಕೀಯದ ದೃಷ್ಟಿಯಿಂದ, ಅಲ್ಫ್ ಗುನ್ನಾರ್ ನಿಲ್ಸೆನ್ ಮತ್ತು ಶ್ರೀಲತಾ ರಾಯ್ ಅವರು ಶೋಷಿತ ಸಮುದಾಯಗಳ ಸಕ್ರಿಯ ಹೋರಾಟ ಮತ್ತು ಸಂಘಟನೆಯ ಮಹತ್ವವನ್ನು ಒತ್ತಿಹೇಳಿದ್ದಾರೆ. ಬಂಜಾರ ಸಮುದಾಯದ ರಾಜಕೀಯ ಬೆಳವಣಿಗೆ ಕೇವಲ ಚುನಾವಣಾ ಫಲಿತಾಂಶವಲ್ಲ, ದೀರ್ಘಕಾಲೀನ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂವಿಧಾನಾತ್ಮಕ ಹಕ್ಕುಗಳಿಗಾಗಿ ನಡೆದ ಹೋರಾಟಗಳ ಫಲಿತಾಂಶವಾಗಿದೆ. ಈ ನಾಲ್ಕು ಸೈದ್ಧಾಂತಿಕ ಪರಿಕಲ್ಪನೆಗಳನ್ನು ಪರಸ್ಪರ ಪೂರಕವಾಗಿ ಬಳಸಿಕೊಂಡು, 2008 ರಿಂದ 2026ರವರೆಗಿನ ಕರ್ನಾಟಕದ ರಾಜಕೀಯ ಹಿನ್ನೆಲೆಯಲ್ಲಿನ ಬಂಜಾರ ಸಮುದಾಯದ ರಾಜಕೀಯ ಪ್ರಾತಿನಿಧ್ಯ, ನಾಯಕತ್ವ ಮತ್ತು ಒಳಮೀಸಲಾತಿ ಚರ್ಚೆಗಳ ಪರಿಣಾಮಗಳನ್ನು ಸಮಗ್ರವಾಗಿ ವಿಶ್ಲೇಷಿಸಲು ಈ ಚೌಕಟ್ಟು ಸೂಕ್ತವಾಗಿದೆ.

ಕರ್ನಾಟಕದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳ ರಾಜಕೀಯ ಸಬಲೀಕರಣವನ್ನು ತಳಮಟ್ಟದ ನಾಯಕತ್ವ ಮತ್ತು ಸಬಾಲ್ಟರ್ನ್ ರಾಜಕೀಯ ಪರಿಕಲ್ಪನೆಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಂಪನ್ಮೂಲಗಳಿಂದ ವಂಚಿತ ಸಮುದಾಯಗಳು ಸ್ಥಳೀಯ ಹೋರಾಟಗಳು, ಜನಸೇವಾ ಚಟುವಟಿಕೆಗಳು ಮತ್ತು ಸಂಘಟನಾ ಸಾಮರ್ಥ್ಯದ ಮೂಲಕ ಶಾಸನಸಭೆಗೆ ಪ್ರವೇಶಿಸುತ್ತವೆ. ಬಂಜಾರ ಸಮುದಾಯದ ಹಲವಾರು ನಾಯಕರು ಈ ರೀತಿಯ ತಳಮಟ್ಟದ ರಾಜಕೀಯ ಪ್ರಕ್ರಿಯೆಗಳಿಂದ ತಮ್ಮ ಸ್ಥಾನಮಾನವನ್ನು ನಿರ್ಮಿಸಿಕೊಂಡಿದ್ದು, ಪಿ.ರಾಜೀವ್ ಅವರ ರಾಜಕೀಯ ಪಯಣ ಅದಕ್ಕೆ ಉದಾಹರಣೆಯಾಗಿದೆ. ಗ್ರಾಮೀಣ ಹಿನ್ನೆಲೆಯಲ್ಲಿ ಬೆಳೆದ ಅವರು, ಬಾಲ್ಯದಿಂದಲೇ ಎದುರಿಸಿದ ಬಡತನ ಮತ್ತು ಶಿಕ್ಷಣದ ಕೊರತೆಗಳಿಂದ ಸಾಮಾಜಿಕ ನ್ಯಾಯ ಮತ್ತು

ಸಮಾನ ಅವಕಾಶಗಳ ಬಗ್ಗೆ ಗಾಢ ಅರಿವನ್ನು ಪಡೆದರು. ಕರ್ನಾಟಕ ಪೊಲೀಸ್ ಇಲಾಖೆಯಲ್ಲಿ ಸಬ್–ಇನ್ಸ್ಪೆಕ್ಟರಾಗಿ ಸೇವೆ ಸಲ್ಲಿಸಿದ್ದ ಅವರು, ಸ್ಥಳೀಯ ಸಮಸ್ಯೆಗಳನ್ನು ಸಮೀಪದಿಂದ ಅರಿತು, ಜನರ ವಿಶ್ವಾಸವನ್ನು ಗಳಿಸಿದರು. 2013ರಲ್ಲಿ ಕುಡಚಿಯ ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿ ಕಾಂಗ್ರೇಸ್ ಪಕ್ಷದಿಂದ ಚುನಾಯಿತರಾದ ಅವರು ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜನಸಮಸ್ಯೆಗಳಿಗೆ ಸ್ಪಂದಿಸಿ ಜನಪ್ರಿಯತೆ ಗಳಿಸಿದರು. 2018ರಲ್ಲಿ ರಾಜ್ಯದಲ್ಲಿನ ರಾಜಕೀಯ ಧೃವೀಕರಣದಿಂದ ಬಿಜೆಪಿ ಸೇರ್ಪಡೆಗೊಂಡು ಮರು ಆಯ್ಕೆಯಾಗಿದ್ದು, ಇದು ವೈಯಕ್ತಿಕ ನಾಯಕತ್ವ ಮತ್ತು ಪಕ್ಷದ ಸಾಂಸ್ಥಿಕ ಶಕ್ತಿಯ ಪರಸ್ಪರ ಅವಲಂಬಿತ ಸಂಬಂಧವನ್ನು ತೋರಿಸುತ್ತದೆ. ಆದಾಗ್ಯೂ, ಸಬಾಲ್ಟರ್ನ್ ರಾಜಕೀಯದ ಮಿತಿಗಳು ಸ್ಪಷ್ಟವಾಗುತ್ತವೆ; ಸ್ಥಳೀಯ ಜನಪ್ರಿಯತೆ ಇದ್ದರೂ, ಅದನ್ನು ರಾಜ್ಯಮಟ್ಟದ ನೀತಿ ರೂಪಿಸುವಿಕೆಗೆ ಪರಿವರ್ತಿಸುವುದರಲ್ಲಿ ಪಕ್ಷದ ಶಿಸ್ತು, ಕೇಂದ್ರೀಕೃತ ನಾಯಕತ್ವ ಮತ್ತು ಅಧಿಕಾರದ ರಾಜಕೀಯವು ಅಡೆತಡೆ ಬೀರಲಿದೆ.

**ಗಣ್ಯರ ಪಕ್ಷಾಂತರ, ವೃತ್ತಿಪರ ಬಂಡವಾಳ ಮತ್ತು ರಾಜಕೀಯ ಮರುಜೋಡಣೆ:** ಕರ್ನಾಟಕದ ಸಮಕಾಲೀನ ರಾಜಕೀಯದಲ್ಲಿ ನಾಯಕತ್ವವು ಕೇವಲ ತಳಮಟ್ಟದ ಹೋರಾಟ ಅಥವಾ ಜನಾಂದೋಲನಗಳಿಂದ ಮಾತ್ರ ರೂಪುಗೊಳ್ಳುವುದಿಲ್ಲ; ಸಾಮಾಜಿಕ ಗಣ್ಯತೆ, ವೃತ್ತಿಪರ ಪರಿಣತಿ, ರಾಜಕೀಯ ಕುಟುಂಬದ ಹಿನ್ನೆಲೆ ಮತ್ತು ಪಕ್ಷಾಂತರದ ಕಾರ್ಯತಂತ್ರಗಳೂ ಪ್ರಮುಖ ಪಾತ್ರವಹಿಸುತ್ತವೆ. ಡಾ.ಉಮೇಶ್ ಜಾಧವ್ ಅವರ ರಾಜಕೀಯ ಪಯಣವು ರಾಜಕೀಯ ಗಣ್ಯತೆ, ವೃತ್ತಿಪರ ಬಂಡವಾಳ ಮತ್ತು ರಾಜಕೀಯ ಮರುಜೋಡಣೆಯ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಅಧ್ಯಯನವಾಗಿದೆ. ಡಾ.ಉಮೇಶ್ ಜಾಧವ್ ಅವರು ಕಲಬುರಗಿ ಜಿಲ್ಲೆಯ ಹಿರಿಯ ರಾಜಕೀಯ ನಾಯಕ ಬಿ.ಬಿ.ಜಾಧವ್ ಅವರ ಪುತ್ರರಾಗಿದ್ದು, ರಾಜಕೀಯ ಸಂಘಟನೆ ಮತ್ತು ಚುನಾವಣಾ ತಂತ್ರಗಳನ್ನು ಕುಟುಂಬದ ರಾಜಕೀಯ ಪರಂಪರೆ ಮೂಲಕ ಪಡೆದರು. ಇಂತಹ ಎರಡನೇ ತಲೆಮಾರಿನ ರಾಜಕೀಯ ಗಣ್ಯರು ಕುಟುಂಬದ ನೆಲೆಯನ್ನು ಹಾಗೂ ಸಂಘಟನಾ ಜಾಲವನ್ನು ಬಳಸಿಕೊಂಡು ರಾಜಕೀಯ ಪ್ರವೇಶದ ಅಡೆತಡೆಗಳನ್ನು ಹಿನ್ನಡೆಗೊಳಿಸುತ್ತಾರೆ. ಆದರೆ, ಅವರ ಯಶಸ್ಸು ಕೇವಲ ಕುಟುಂಬದ ಪರಂಪರೆಯೇ ಅಲ್ಲ; ವೈದ್ಯಕೀಯ ವೃತ್ತಿಯಲ್ಲಿ ಪರಿಣತಿ ಮತ್ತು ಸಾರ್ವಜನಿಕ ಸೇವೆಯ ಮೂಲಕ ಅವರು ಸಮಾಜದಲ್ಲಿ ವಿಶ್ವಾಸಾರ್ಹತೆ ಮತ್ತು ಗೌರವವನ್ನು ಗಳಿಸಿದ್ದರು.

ರಾಜಕೀಯ ವಿಜ್ಞಾನದಲ್ಲಿ ವೃತ್ತಿಪರ ಬಂಡವಾಳ ಎಂಬ ಪರಿಕಲ್ಪನೆ, ನಾಯಕನ ವೃತ್ತಿಪರ ಅನುಭವ ಮತ್ತು ಶಿಕ್ಷಣ ರಾಜಕೀಯ ವಿಶ್ವಾಸಾರ್ಹತೆಯನ್ನು ಹೇಗೆ ಬೆಳೆಸುತ್ತವೆ ಎಂಬುದನ್ನು ವಿವರಿಸುತ್ತದೆ. ಡಾ.ಜಾಧವ್ ಅವರು ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುವ ಮೂಲಕ ಜನರ ವಿಶ್ವಾಸವನ್ನು ಪಡೆದರು. ಈ ವೃತ್ತಿಪರ ಸಾಧನೆ ಅವರು 'ತಂತ್ರಜ್ಞಾನಾಧಾರಿತ ನ್ಯಾಯಸಮ್ಮತತೆ' ಪಡೆಯಲು ಸಹಾಯ ಮಾಡಿತು. ಅಂದರೆ, ಅವರ ನಾಯಕತ್ವವು ಜಾತಿ ಅಥವಾ

ಕುಟುಂಬದ ಹಿನ್ನೆಲೆಯ ಜೊತೆಗೆ ವೃತ್ತಿಪರ ಸಾಮರ್ಥ್ಯ ಮತ್ತು ಸಾರ್ವಜನಿಕ ಸೇವೆಯ ಮೇಲೂ ಆಧಾರಿತವಾಗಿದೆ. ಇದರಿಂದ ಅವರ ನಾಯಕತ್ವವನ್ನು 'ಉಭಯ ಅಸ್ಮಿತೆ' ಹೊಂದಿರುವುದು ಎಂದು ವಿವರಿಸಬಹುದು. ವೈದ್ಯರಾಗಿ ಹಾಗೂ ರಾಜಕಾರಣಿಯಾಗಿ ಅವರ ಎರಡು ವಿಭಿನ್ನ ಗುರುತುಗಳು ರಾಜಕೀಯ ಸ್ವೀಕಾರಾರ್ಹತೆಯನ್ನು ವಿಸ್ತರಿಸಿ, ಸಾಂಪ್ರದಾಯಿಕ ಜಾತಿ ರಾಜಕಾರಣದ ಮಿತಿಗಳನ್ನು ಭಾಗಶಃ ಮೀರಿ ಮುಂದುವರಿಯಲು ಅವಕಾಶ ನೀಡಿತು. ಡಾ.ಉಮೇಶ್ ಜಾಧವ್ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಚಿಂಚೋಳಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದು, ಆರೋಗ್ಯ, ಶಿಕ್ಷಣ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಿದರು. ಆದರೆ 2018ರ ಅನಂತರ ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಪಕ್ಷಗಳ ನಡುವಿನ ಅಧಿಕಾರ ಪೈಪೋಟಿ ಅವರ ರಾಜಕೀಯ ದಿಕ್ಕನ್ನು ಬದಲಾಯಿಸಿತು. 2019ರಲ್ಲಿ ಅವರು ಕಾಂಗ್ರೆಸ್ ಪಕ್ಷದಿಂದ ರಾಜೀನಾಮೆ ನೀಡಿ ಭಾರತೀಯ ಜನತಾ ಪಕ್ಷ (ಬಿಜೆಪಿ) ಸೇರಿದರು ಮತ್ತು ಅನಂತರ ಕಲಬುರಗಿ ಮೀಸಲು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಹಿರಿಯ ಕಾಂಗ್ರೆಸ್ ನಾಯಕರಾದಂತಹ ಡಾ.ಎಂ.ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಜಯ ಸಾಧಿಸಿ ರಾಷ್ಟ್ರ ರಾಜಕಾರಣದಲ್ಲಿ ತನ್ನ ಸ್ಥಾನ ಬಲಪಡಿಸಿದರು. ಈ ಬೆಳವಣಿಗೆ ಕರ್ನಾಟಕದ ರಾಜಕೀಯ ಮರುಜೋಡಣೆ ಮತ್ತು ಪಕ್ಷಾಂತರ ರಾಜಕೀಯದ ಮಹತ್ವವನ್ನು ಸ್ಪಷ್ಟಪಡಿಸುತ್ತದೆ. ಡಾ.ಉಮೇಶ್ ಜಾಧವ್ ಅವರ ಪಕ್ಷಾಂತರವನ್ನು ತರ್ಕಬದ್ಧ ಆಯ್ಕೆ ಸಿದ್ಧಾಂತದ ದೃಷ್ಟಿಕೋನದಿಂದ ನೋಡಬಹುದು. ಈ ಸಿದ್ಧಾಂತದ ಪ್ರಕಾರ ರಾಜಕೀಯ ನಾಯಕರು ಸೈದ್ಧಾಂತಿಕ ನಿಷ್ಠೆಯಿಂದ ಬಲವಾಗಿ ನಿರ್ಧಾರ ಕೈಗೊಳ್ಳುವವರಾಗಿರಲಾರೆ; ಬದಲಾಗಿ ರಾಜಕೀಯ ಅವಕಾಶಗಳು, ಅಧಿಕಾರ ಪ್ರವೇಶ, ಚುನಾವಣಾ ಯಶಸ್ಸಿನ ಸಾಧ್ಯತೆ ಮತ್ತು ಭವಿಷ್ಯ ರಾಜಕೀಯ ವಿಸ್ತಾರವನ್ನು ಪರಿಗಣಿಸಿ ತಂತ್ರಾತ್ಮಕ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ರಾಜಕೀಯ ಗಣ್ಯರ ಅಧ್ಯಯನದಿಂದ ತಿಳಿದಂತೆ, ಸಾಮಾಜಿಕ ಮತ್ತು ರಾಜಕೀಯ ಬಂಡವಾಳ ಹೊಂದಿರುವ ನಾಯಕರು ಪಕ್ಷದೊಳಗೆ ಹೆಚ್ಚಿನ ಚೌಕಾಸಿ ಸಾಮರ್ಥ್ಯ ಹೊಂದಿರುತ್ತಾರೆ. ಸಂಘಟನಾ ಅನುಭವ, ಆರ್ಥಿಕ ಸಂಪನ್ಮೂಲಗಳು, ಚುನಾವಣಾ ಪ್ರಭಾವ ಮತ್ತು ಜನಪ್ರಿಯತೆ ಇವರಿಗೆ ಪಕ್ಷಾಂತರ ಸಂದರ್ಭದಲ್ಲಿ ಉತ್ತಮ ರಾಜಕೀಯ ಅವಕಾಶಗಳನ್ನು ಒದಗಿಸುತ್ತವೆ. ಡಾ.ಉಮೇಶ್ ಜಾಧವ್ ಅವರ ಉದಾಹರಣೆ ತಳಮಟ್ಟದ ನಾಯಕತ್ವದಿಗಿಂತ ರಾಜಕೀಯ ಗಣ್ಯ ಹಿನ್ನೆಲೆಯ ನಾಯಕರು ಪಕ್ಷಾಂತರದಲ್ಲಿ ಹೆಚ್ಚು ಸ್ವಾಯತ್ತತೆ ಹಾಗೂ ಅವಕಾಶಗಳನ್ನು ಹೊಂದಿರುತ್ತಾರೆ ಎಂಬುದನ್ನು ಸೂಚಿಸುತ್ತದೆ. ಅವರು ತಮ್ಮ ವೈಯಕ್ತಿಕ ಪ್ರಭಾವದಿಂದ ಹೊಸ ರಾಜಕೀಯ ವೇದಿಕೆಗಳಲ್ಲಿ ತ್ವರಿತ ಹೊಂದಾಣಿಕೆ ಸಾಧಿಸುವ ಸಾಮರ್ಥ್ಯ ಹೊಂದಿದ್ದಾರೆ. ಡಾ.ಉಮೇಶ್ ಜಾಧವ್ ಅವರ ರಾಜಕೀಯ ಪಯಣವು ಕರ್ನಾಟಕದ ಸಮಕಾಲೀನ ರಾಜಕೀಯದಲ್ಲಿ ನಾಯಕತ್ವದ ಬಹುಆಯಾಮಿಕ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. ರಾಜಕೀಯ ಕುಟುಂಬದ ಹಿನ್ನೆಲೆ, ವೈದ್ಯಕೀಯ ವೃತ್ತಿಯಿಂದ ದೊರೆತ ಸಾಮಾಜಿಕ ವಿಶ್ವಾಸಾರ್ಹತೆ, ಪಕ್ಷದ ಸಂಘಟನಾ ಬೆಂಬಲ ಮತ್ತು ರಾಜಕೀಯ ಮರುಜೋಡಣೆಯ ಸಾಮರ್ಥ್ಯಗಳ ಸಮನ್ವಯವೇ ಅವರ ಯಶಸ್ಸಿನ ಮೂಲ ಎಂದು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ. ಈ ಪ್ರಕರಣವು ಗಣ್ಯ

ನಾಯಕತ್ವ, ವೃತ್ತಿಪರ ಬಂಡವಾಳ ಮತ್ತು ಪಕ್ಷಾಂತರ ರಾಜಕೀಯ ಪರಸ್ಪರ ಪ್ರಭಾವ ಬೀರುವುದನ್ನು ಹಾಗೂ ನಾಯಕತ್ವ ಬೆಳವಣಿಗೆಯಲ್ಲಿ ಸಾಮಾಜಿಕ ಬಂಡವಾಳ, ವೃತ್ತಿಪರ ಸಾಮರ್ಥ್ಯ ಮತ್ತು ಸಾಂಸ್ಥಿಕ ಅವಕಾಶಗಳು ಸಮಾನ ಮಹತ್ವದ ಅಂಶಗಳಾಗಿವೆ ಎಂಬುದನ್ನು ದೃಢಪಡಿಸುತ್ತದೆ.

**ಜಾತಿ ಆಧಾರಿತ ಕ್ರೋಢೀಕರಣ ಮತ್ತು ಪ್ರಾದೇಶಿಕ ಪಕ್ಷದ ಮಧ್ಯಸ್ಥಿಕೆ:** ಕರ್ನಾಟಕದ ಸಮಕಾಲೀನ ರಾಜಕೀಯದಲ್ಲಿ ಜಾತಿ ಆಧಾರಿತ ರಾಜಕೀಯ ಕ್ರೋಢೀಕರಣವು ಪ್ರಮುಖ ನಿರ್ಣಾಯಕ ಅಂಶವಾಗಿದೆ. 2008 ರಿಂದ 2018ರ ಅವಧಿಯಲ್ಲಿ ಹಲವು ರಾಜಕೀಯ ಪಕ್ಷಗಳು ತಮ್ಮ ಮತಾಧಾರವನ್ನು ವಿಸ್ತರಿಸಲು ಸಾಮಾಜಿಕವಾಗಿ ಹಿಂದುಳಿದ ಸಮುದಾಯಗಳ ರಾಜಕೀಯ ಸಂಘಟನೆಯ ಮೇಲೆ ಹೆಚ್ಚು ಗಮನ ಹರಿಸಿವೆ. ಈ ಪ್ರಕ್ರಿಯೆಯಲ್ಲಿ ಬಂಜಾರ (ಲಂಬಾಣಿ) ಸಮುದಾಯವು ಕೇವಲ ಮತದಾರ ಸಮುದಾಯವಾಗಿರುವುದಿಲ್ಲ, ಅನೇಕ ಕ್ಷೇತ್ರಗಳಲ್ಲಿ ಚುನಾವಣಾ ಫಲಿತಾಂಶಗಳನ್ನು ಪ್ರಭಾವಿಸುವ ಸಂಘಟಿತ ರಾಜಕೀಯ ಶಕ್ತಿಯಾಗಿ ಬೆಳವಣಿಗೆಯಾಗಿದೆ. ಪ್ರಭು ಚವಾಣ್, ಪಿ.ಟಿ.ಪರಮೇಶ್ವರ ನಾಯಕ್, ರುದ್ರಪ್ಪ ಲಮಾಣಿ, ಕೆ.ಬಿ.ಅಶೋಕ್ ನಾಯಕ್, ದೇವಾನಂದ ಪಿ.ಚವಾಣ್ ಮತ್ತು ಪಿ.ಎಸ್.ಸುಧಾಕರ್ ಲಾಲ್ ಅವರು ಈ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ರಾಜಕೀಯ ಸಮಾಜಶಾಸ್ತ್ರದ ಪ್ರಕಾರ, ಜಾತಿ ಅಸ್ಮಿತೆ ಕೇವಲ ಸಾಂಸ್ಕೃತಿಕ ಗುರುತೇ ಅಲ್ಲ, ರಾಜಕೀಯ ಸಂಪನ್ಮೂಲವಾಗಿಯೂ ಕಾರ್ಯನಿರ್ವಹಿಸುತ್ತದೆ. ಬಂಜಾರ ನಾಯಕರಿಗೆ ತಮ್ಮ ಭಾಷೆ, ಸಂಸ್ಕೃತಿ, ತಾಂಡಾ ಜೀವನ ಮತ್ತು ಐತಿಹಾಸಿಕ ಹಿಂದುಳಿತವನ್ನು ರಾಜಕೀಯ ಚರ್ಚೆಯ ಕೇಂದ್ರವನ್ನಾಗಿ ಮಾಡುವ ಮೂಲಕ ಸಮುದಾಯದ ರಾಜಕೀಯ ಕ್ರೋಢೀಕರಣ ಮತ್ತು ಸಂಘಟನಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ಪ್ರಭು ಚವಾಣ್ ಅವರು ಔರಾದ್ ವಿಧಾನಸಭಾ ಕ್ಷೇತ್ರದ ಪ್ರಮುಖ ಬಂಜಾರ ನಾಯಕರು. ಅವರು ಶಿಕ್ಷಣ, ಉದ್ಯೋಗ, ಮೂಲಸೌಕರ್ಯ, ತಾಂಡಾ ಅಭಿವೃದ್ಧಿ ಮತ್ತು ಸಾಂವಿಧಾನಾತ್ಮಕ ಹಕ್ಕುಗಳ ಕುರಿತು ನಿರಂತರ ಧ್ವನಿಯೆತ್ತಿದ್ದರು. ಬಿಜೆಪಿ ಮೂಲಕ ಶಾಸಕರಾಗಿ ಹಾಗೂ ಅನಂತರ ಸಚಿವರಾಗಿ ಕಾರ್ಯನಿರ್ವಹಿಸಿ, ಸಮುದಾಯದ ರಾಜಕೀಯ ಸಂಘಟನೆಯನ್ನು ಆಡಳಿತಾತ್ಮಕ ಪ್ರಭಾವದೊಂದಿಗೆ ಜೋಡಿಸುವಲ್ಲಿ ಯಶಸ್ವಿಯಾದರು. ಅವರ ನಾಯಕತ್ವವು ಜಾತಿ ಅಸ್ಮಿತೆಯನ್ನು ಕೇವಲ ಚುನಾವಣಾ ರಾಜಕೀಯಕ್ಕೆ ಸೀಮಿತಗೊಳಿಸದೆ, ಸರ್ಕಾರದ ಅಭಿವೃದ್ಧಿ ಯೋಜನೆಗಳು ಮತ್ತು ಸಂಪನ್ಮೂಲಗಳನ್ನು ಸಮುದಾಯದ ಅಭಿವೃದ್ಧಿಯೊಂದಿಗೆ ಸಂಪರ್ಕಿಸುವ ಪ್ರಯತ್ನವಾಯಿತು. ಪಿ.ಟಿ.ಪರಮೇಶ್ವರ ನಾಯಕ್ ಅವರು ಕಲ್ಯಾಣ ಕರ್ನಾಟಕದ ಪ್ರಮುಖ ಬಂಜಾರ ನಾಯಕರು. ಅವರು ಕಾಂಗ್ರೆಸ್ ಪಕ್ಷದ ಸಂಘಟನಾ ನಿಷ್ಠೆ, ಆಡಳಿತಾತ್ಮಕ ಅನುಭವ ಮತ್ತು ಕಲ್ಯಾಣಮುಖಿ ರಾಜಕಾರಣದ ಮೂಲಕ ತಮ್ಮ ಸ್ಥಾನವನ್ನು ಬಲಪಡಿಸಿದರು. ಕಾರ್ಮಿಕ ಮತ್ತು ಅರಣ್ಯ ಸಚಿವರಾಗಿ ಗ್ರಾಮೀಣ ಉದ್ಯೋಗ, ಅರಣ್ಯ ಸಂಪನ್ಮೂಲ ಸಂರಕ್ಷಣೆ ಮತ್ತು ಪರಿಶಿಷ್ಟ ಜಾತಿಗಳ ಅಭಿವೃದ್ಧಿಗೆ ಆದ್ಯತೆ ನೀಡಿದರು. ಅವರ ನಾಯಕತ್ವವು 'ಸಾಂಸ್ಥಿಕ ನಾಯಕತ್ವ' ಮಾದರಿಯನ್ನು ಪ್ರತಿನಿಧಿಸುತ್ತದೆ. ರುದ್ರಪ್ಪ ಲಮಾಣಿ ಅವರು ಹಾವೇರಿ ವಿಧಾನಸಭಾ ಕ್ಷೇತ್ರದ ಸಮನ್ವಯ ನಾಯಕರು. ಅವರು ಬಂಜಾರ

ಸಮುದಾಯದ ಜೊತೆಗೆ ಇತರ ಹಿಂದುಳಿದ ವರ್ಗಗಳು ಮತ್ತು ಕೃಷಿಕ ಸಮುದಾಯಗಳನ್ನೂ ಒಗ್ಗೂಡಿಸಲು ಯಶಸ್ವಿಯಾದರು. ಮುಜರಾಯಿ ಮತ್ತು ಜವಳಿ ಸಚಿವರಾಗಿ ಗ್ರಾಮೀಣ ಮೂಲಸೌಕರ್ಯ, ಧಾರ್ಮಿಕ ಸಂಸ್ಥೆಗಳ ನಿರ್ವಹಣೆ ಮತ್ತು ಸ್ಥಳೀಯ ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಿದರು. ಅವರ ನಾಯಕತ್ವವು ಜಾತಿ ಆಧಾರಿತ ಬೆಂಬಲವನ್ನು ವಿಶಾಲ ಸಾಮಾಜಿಕ ಮೈತ್ರಿಯಾಗಿ ವಿಸ್ತರಿಸಿರುತ್ತದೆ. ಈ ನಾಯಕತ್ವಗಳು ಬಂಜಾರ ಸಮುದಾಯದ ರಾಜಕೀಯ ಸಬಲೀಕರಣ ಮತ್ತು ಕ್ಷೇತ್ರೀಯ ರಾಜಕೀಯದಲ್ಲಿ ಅವರ ಪ್ರಭಾವವನ್ನು ಸುದೃಢಗೊಳಿಸಿರುವುದನ್ನು ಸೂಚಿಸುತ್ತವೆ.

**ಪ್ರಾದೇಶಿಕ ಪಕ್ಷಗಳು ಮತ್ತು ಸ್ಥಳೀಯ ನಾಯಕತ್ವ:** ಕರ್ನಾಟಕದ ರಾಜಕೀಯದಲ್ಲಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ಜೊತೆಗೆ ಪ್ರಾದೇಶಿಕವಾಗಿ ಜಾತ್ಯತೀತ ಜನತಾದಳ (ಜೆಡಿಎಸ್) ನಂತಹ ಪಕ್ಷಗಳು ಸ್ಥಳೀಯ ಜಾತಿ ಸಮೀಕರಣಗಳಿಗೆ ಮಹತ್ವ ನೀಡುತ್ತವೆ. ಕೊರಟಗೆರೆ ವಿಧಾನಸಭಾ ಕ್ಷೇತ್ರವನ್ನು ಪ್ರತಿನಿಧಿಸಿದ ಪಿ.ಎಸ್. ಸುಧಾಕರ್ ಲಾಲ್ ಅವರ ರಾಜಕೀಯ ಪಯಣ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಜೆಡಿಎಸ್ ಮೂಲಕ ರಾಜಕೀಯವಾಗಿ ಬೆಳೆಯುವ ಅವಕಾಶ ಪಡೆದ ಅವರು ಸ್ಥಳೀಯ ಸಮಸ್ಯೆಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಸಮುದಾಯ ಆಧಾರಿತ ರಾಜಕೀಯ ಸಂಘಟನೆಗೆ ಹೆಚ್ಚು ಒತ್ತು ನೀಡಿದರು. ಪ್ರಾದೇಶಿಕ ಪಕ್ಷಗಳು ಸ್ಥಳೀಯ ನಾಯಕರಿಗೆ ಹೆಚ್ಚಿನ ಸ್ವಾಯತ್ತತೆ, ಪ್ರಾದೇಶಿಕ ಅಸ್ಮಿತೆಗೆ ಮಾನ್ಯತೆ ಹಾಗೂ ಗ್ರಾಮೀಣ ಸಮುದಾಯಗಳೊಂದಿಗೆ ನೇರ ಸಂಪರ್ಕ ಸಾಧಿಸುವ ಅವಕಾಶ ನೀಡುತ್ತದೆ ಎಂಬುದನ್ನು ಅವರ ನಾಯಕತ್ವ ತೋರಿಸುತ್ತದೆ. ಜಾತಿ ಆಧಾರಿತ ರಾಜಕೀಯ ಕ್ರೋಢೀಕರಣವು ಬಂಜಾರ ಸಮುದಾಯದ ರಾಜಕೀಯ ಗೋಚರತೆಯನ್ನು ಹೆಚ್ಚಿಸಿದರೂ, ಕೆಲವು ಮಿತಿಗಳೂ ಕಂಡುಬರುತ್ತವೆ. ಅವುಗಳೆಂದರೆ;

- ಮೊದಲನೆಯದಾಗಿ; ಜಾತಿ ರಾಜಕೀಯವು ಕೆಲವೊಮ್ಮೆ ಸಮುದಾಯದ ವಿಶಾಲ ಸಮಾಜೋ–ಆರ್ಥಿಕ ಸಮಸ್ಯೆಗಳಿಗಿಂತಲೂ ಗುರುತಿನ ಅಥವಾ ಅಸ್ಮಿತೆಯ ರಾಜಕೀಯಕ್ಕೆ ಹೆಚ್ಚು ಆದ್ಯತೆ ನೀಡುತ್ತದೆ.
- ಎರಡನೆಯದಾಗಿ; ವಿವಿಧ ರಾಜಕೀಯ ಪಕ್ಷಗಳಲ್ಲಿ ವಿಭಜನೆಯಾದ ನಾಯಕತ್ವವು ಸಮುದಾಯದ ಏಕೀಕೃತ ರಾಜಕೀಯ ಧ್ವನಿಯನ್ನು ದುರ್ಬಲಗೊಳಿಸುವ ಅಪಾಯವಿದೆ.
- ಮೂರನೆಯದಾಗಿ; ಚುನಾವಣಾ ಯಶಸ್ಸು ದೊರೆತರೂ, ಅದು ದೀರ್ಘಕಾಲೀನ ನೀತಿಗಳಾಗಿ ಪರಿವರ್ತಿಸುವುದು ಸವಾಲಾಗಿರುತ್ತದೆ. 2008 ರಿಂದ 2018ರ ಅವಧಿಯಲ್ಲಿ ಬಂಜಾರ ಸಮುದಾಯದ ರಾಜಕೀಯ ಬೆಳವಣಿಗೆಯು ಜಾತಿ ಅಸ್ಮಿತೆ, ಪಕ್ಷ ಸಂಘಟನೆ ಮತ್ತು ಪ್ರಾದೇಶಿಕ ರಾಜಕೀಯದ ಪರಸ್ಪರ ಕ್ರಿಯೆಯಿಂದ ರೂಪುಗೊಂಡಿದೆ.

ಪ್ರಭು ಚವಾಣ್ ಅವರು ಜಾತಿ ಅಸ್ಮಿತೆಯನ್ನು ಸಾಂಸ್ಥಿಕ ಅಧಿಕಾರವಾಗಿ ಪರಿವರ್ತಿಸಿದರೆ, ಪಿ.ಟಿ.ಪರಮೇಶ್ವರ ನಾಯಕ್ ಅವರು ಆಡಳಿತಾತ್ಮಕ ಮತ್ತು ಕಲ್ಯಾಣಮುಖಿ ನಾಯಕತ್ವದ ಮೂಲಕ ಸಮುದಾಯ ಹಿತಾಸಕ್ತಿಗಳನ್ನು ಪ್ರತಿನಿಧಿಸಿದರು. ರುದ್ರಪ್ಪ ಲಮಾಣಿ ಅವರ ಸಮನ್ವಯ ನಾಯಕತ್ವದ ಮಾದರಿಯನ್ನು ಪ್ರದರ್ಶಿಸಿದರೆ, ಪಿ.ಎಸ್.ಸುಧಾಕರ್ ಲಾಲ್ ಅವರು ಪ್ರಾದೇಶಿಕ ಪಕ್ಷಗಳು ಸ್ಥಳೀಯ ನಾಯಕತ್ವಕ್ಕೆ ಒದಗಿಸುವ ಅವಕಾಶಗಳನ್ನು ಚಿತ್ರಿಸಿದ್ದಾರೆ. ಈ ರೀತಿಯ ನಾಯಕತ್ವಗಳು ಬಂಜಾರ ಸಮುದಾಯದ ರಾಜಕೀಯ ಸಬಲೀಕರಣ ಮತ್ತು ಸ್ಥಳೀಯ ರಾಜಕೀಯದಲ್ಲಿ ಅವರ ಪ್ರಭಾವವನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಹೊಸ ತಲೆಮಾರಿನ ವೃತ್ತಿಪರ ಮತ್ತು ಛೇದಕ:** ಕರ್ನಾಟಕದಲ್ಲಿ ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ನಾಯಕತ್ವವು ಇತ್ತೀಚಿನ ವರ್ಷಗಳಲ್ಲಿ ಗಮನಾರ್ಹ ಗುಣಾತ್ಮಕ ಬದಲಾವಣೆಗೆ ಒಳಗಾಗಿದೆ. ಆರಂಭಿಕ ಹಂತದಲ್ಲಿ ಸಮುದಾಯದ ನಾಯಕತ್ವವು ಮುಖ್ಯವಾಗಿ ಜಾತಿ ಅಸ್ಮಿತೆ, ಸಮುದಾಯ ಸಂಘಟನೆ ಮತ್ತು ಚುನಾವಣಾ ಕ್ರೋಢೀಕರಣದ ಮೇಲೆ ಕೇಂದ್ರೀಕೃತವಾಗಿದ್ದರೆ, ಹೊಸ ತಲೆಮಾರಿನ ನಾಯಕರು ಶಿಕ್ಷಣ, ವೃತ್ತಿಪರ ಪರಿಣತಿ, ಸಾರ್ವಜನಿಕ ನೀತಿ, ಮಹಿಳಾ ಸಬಲೀಕರಣ ಮತ್ತು ಸಮಗ್ರ ಅಭಿವೃದ್ಧಿಯಂತಹ ವಿಶಾಲ ವಿಷಯಗಳಿಗೆ ಆದ್ಯತೆ ನೀಡುತ್ತಿದ್ದಾರೆ. ಈ ಬದಲಾವಣೆಯು ಬಂಜಾರ ಸಮುದಾಯದ ರಾಜಕೀಯವು ಗುರುತಿನ ರಾಜಕೀಯದಿಂದ ಅಭಿವೃದ್ಧಿ–ಆಧಾರಿತ ರಾಜಕೀಯದತ್ತ ಕ್ರಮೇಣ ಸಾಗುತ್ತಿರುವುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಡಾ.ಅವಿನಾಶ್ ಯು.ಜಾಧವ್ ಮತ್ತು ಶಾರದಾಪುರಣ್ ನಾಯಕ್ ಅವರ ನಾಯಕತ್ವವು ಹೊಸ ತಲೆಮಾರಿನ ರಾಜಕೀಯದ ಎರಡು ವಿಭಿನ್ನ ಆದರೆ ಪರಸ್ಪರ ಪೂರಕ ಆಯಾಮಗಳನ್ನು ಪ್ರತಿನಿಧಿಸುತ್ತದೆ. ಮೊದಲನೆಯದು ವೃತ್ತಿಪರ ನಾಯಕತ್ವದ ಬೆಳವಣಿಗೆಯಾದರೆ, ಎರಡನೆಯದು ಲಿಂಗ ಮತ್ತು ಜಾತಿ ಆಧಾರಿತ ಬಹುಮುಖ ಅಸಮಾನತೆಗಳನ್ನು ಮೀರಿ ರೂಪುಗೊಂಡ ಛೇದಕ ನಾಯಕತ್ವವಾಗಿದೆ. ಡಾ.ಅವಿನಾಶ್ ಯು.ಜಾಧವ್ ಅವರು ಬಂಜಾರ ಸಮುದಾಯದ ಶಿಕ್ಷಣ ಪಡೆದ ಹೊಸ ತಲೆಮಾರಿನ ರಾಜಕೀಯ ನಾಯಕತ್ವವನ್ನು ಪ್ರತಿನಿಧಿಸುತ್ತಾರೆ. ವೈದ್ಯಕೀಯ ವೃತ್ತಿಪರರಾಗಿರುವ ಅವರು, ತಮ್ಮ ವೃತ್ತಿಪರ ಅನುಭವವನ್ನು ಸಾರ್ವಜನಿಕ ಸೇವೆ ಮತ್ತು ರಾಜಕೀಯ ನಾಯಕತ್ವದೊಂದಿಗೆ ಸಂಯೋಜಿಸುವ ಪ್ರಯತ್ನ ಮಾಡಿದ್ದಾರೆ. ಇದು ಬಂಜಾರ ಸಮುದಾಯದ ರಾಜಕೀಯದಲ್ಲಿ ಕಾಣಿಸಿಕೊಳ್ಳುತ್ತಿರುವ ಮಹತ್ವದ ಪರಿವರ್ತನೆಯಾಗಿದೆ. ಸಾಂಪ್ರದಾಯಿಕ ಜಾತಿ ರಾಜಕೀಯದಲ್ಲಿ ಸಮುದಾಯದ ಗುರುತು ಮತ್ತು ಚುನಾವಣಾ ಸಮೀಕರಣಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಆದರೆ ಹೊಸ ತಲೆಮಾರಿನ ನಾಯಕತ್ವವು ಆರೋಗ್ಯ, ಶಿಕ್ಷಣ, ಯುವಜನರ ಉದ್ಯೋಗ, ಗ್ರಾಮೀಣ ಮೂಲಸೌಕರ್ಯ, ಡಿಜಿಟಲ್ ಸೇವೆಗಳು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯಂತಹ ಸಾರ್ವಜನಿಕ ನೀತಿ ವಿಷಯಗಳನ್ನು ರಾಜಕೀಯ ಚರ್ಚೆಯ ಕೇಂದ್ರಬಿಂದುವಾಗಿಸಲು ಪ್ರಯತ್ನಿಸುತ್ತಿದೆ. ಈ ದೃಷ್ಟಿಕೋನವು 'ನೀತಿ–ಆಧಾರಿತ ನಾಯಕತ್ವ' ಎಂಬ ಪರಿಕಲ್ಪನೆಗೆ ಹೊಂದಿಕೆಯಾಗುತ್ತದೆ. ಈ ಮಾದರಿಯಲ್ಲಿ ನಾಯಕನ ಯಶಸ್ಸನ್ನು ಕೇವಲ ಚುನಾವಣಾ

ವಿಜಯದಿಂದಲ್ಲ, ಸಾರ್ವಜನಿಕ ಸಮಸ್ಯೆಗಳಿಗೆ ನೀಡುವ ಪರಿಹಾರಗಳು, ಆಡಳಿತಾತ್ಮಕ ಸಾಮರ್ಥ್ಯ ಮತ್ತು ಅಭಿವೃದ್ಧಿ ದೃಷ್ಟಿಕೋನದ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ. ಡಾ.ಅವಿನಾಶ್ ಯು.ಜಾಧವ್ ಅವರ ನಾಯಕತ್ವವು ಬಂಜಾರ ಸಮುದಾಯದ ರಾಜಕೀಯವು ಶಿಕ್ಷಣ ಮತ್ತು ವೃತ್ತಿಪರ ಪರಿಣತಿಯನ್ನು ಹೊಸ ರಾಜಕೀಯ ಬಂಡವಾಳವಾಗಿ ಅಳವಡಿಸಿಕೊಳ್ಳುತ್ತಿರುವುದನ್ನು ಸೂಚಿಸುತ್ತದೆ.

ಬಂಜಾರ ಸಮುದಾಯದ ರಾಜಕೀಯ ಬೆಳವಣಿಗೆಯಲ್ಲಿ ಮಹಿಳಾ ನಾಯಕತ್ವದ ಪಾತ್ರವೂ ಕ್ರಮೇಣ ವಿಸ್ತರಿಸುತ್ತಿರುವ ಕಾರಣವಾಗಿಯೇ ಈ ಹಿನ್ನೆಲೆಯಲ್ಲಿ ಶಾರದಾಪುರಣ್ ನಾಯಕ್ ಅವರ ರಾಜಕೀಯ ಪಯಣವು ಛೇದಕತೆ ಎಂಬ ಸೈದ್ಧಾಂತಿಕ ಪರಿಕಲ್ಪನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಅಮೆರಿಕದ ಕಾನೂನು ವಿದ್ವಾಂಸರಾದ ಕಿಂಬರ್ಲೆ ಕ್ರೆನ್ಶಾ ಪ್ರತಿಪಾದಿಸಿದ ಛೇದಕತೆ ಸಿದ್ಧಾಂತದ ಪ್ರಕಾರ, ವ್ಯಕ್ತಿಯ ಮೇಲೆ ಒಂದೇ ರೀತಿಯ ಸಾಮಾಜಿಕ ಅಸಮಾನತೆ ಪರಿಣಾಮ ಬೀರುವುದಿಲ್ಲ; ಜಾತಿ, ಲಿಂಗ, ವರ್ಗ, ಆರ್ಥಿಕ ಸ್ಥಿತಿ, ಪ್ರದೇಶ ಮತ್ತು ಶಿಕ್ಷಣದಂತಹ ಹಲವು ಅಂಶಗಳು ಪರಸ್ಪರ ಸಂಯೋಜಿತವಾಗಿ ಅಸಮಾನತೆಯನ್ನು ರೂಪಿಸುತ್ತವೆ. ಈ ದೃಷ್ಟಿಕೋನದಿಂದ ನೋಡಿದಾಗ, ಬಂಜಾರ ಸಮುದಾಯಕ್ಕೆ ಸೇರಿದ ಮಹಿಳೆಯಾಗಿ ಶಾರದಾಪುರಣ್ ನಾಯಕ್ ಅವರು ಜಾತಿ ಮತ್ತು ಲಿಂಗ ಎಂಬ ಎರಡು ಪ್ರಮುಖ ಸಾಮಾಜಿಕ ತಾರತಮ್ಯಗಳನ್ನು ಏಕಕಾಲದಲ್ಲಿ ಎದುರಿಸಬೇಕಾಯಿತು. ಸಾಮಾಜಿಕವಾಗಿ ಅಂಚಿನಲ್ಲಿರುವ ಸಮುದಾಯದ ಮಹಿಳೆಯಾಗಿ ರಾಜಕೀಯ ಪ್ರವೇಶಿಸುವುದು, ಚುನಾವಣೆಯಲ್ಲಿ ಸ್ಪರ್ಧಿಸುವುದು ಮತ್ತು ಜನಪ್ರತಿನಿಧಿಯಾಗಿ ಹೊರಹೊಮ್ಮುವುದು ಸ್ವತಃ ಒಂದು ಮಹತ್ವದ ಪ್ರಜಾಪ್ರಭುತ್ವ ಸಾಧನೆಯಾಗಿದೆ.

**ಮಹಿಳಾ ನಾಯಕತ್ವ ಮತ್ತು ಸಾಮಾಜಿಕ ಪರಿವರ್ತನೆ:** ಕರ್ನಾಟಕದ ರಾಜಕೀಯವು ಬಹುಕಾಲ ಪುರುಷ ಪ್ರಧಾನವಾಗಿದ್ದ ಹಿನ್ನೆಲೆಯಲ್ಲಿ ಮಹಿಳಾ ನಾಯಕರು ಹಣಬಲ, ಸಂಘಟನಾ ಮಿತಿಗಳು, ರಾಜಕೀಯ ಪೈಪೋಟಿ ಮತ್ತು ಸಾಮಾಜಿಕ ಪೂರ್ವಾಗ್ರಹಗಳಂತಹ ಅನೇಕ ಸವಾಲುಗಳನ್ನು ಎದುರಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿಯೂ ಶಾರದಾಪುರಣ್ ನಾಯಕ್ ಅವರು ಶಾಸಕಿಯಾಗಿ ಕಾರ್ಯನಿರ್ವಹಿಸಿರುವುದು ಮಹಿಳೆಯರ ರಾಜಕೀಯ ಸಾಮರ್ಥ್ಯ ಮತ್ತು ಪ್ರಜಾಪ್ರಭುತ್ವದ ಒಳಗೊಳ್ಳುವಿಕೆಯ ವಿಸ್ತರಣೆಯನ್ನು ಪ್ರತಿಬಿಂಬಿಸುತ್ತದೆ. ಅವರ ಸಾರ್ವಜನಿಕ ಜೀವನದಲ್ಲಿ ಮಹಿಳಾ ಸಬಲೀಕರಣ, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣಕ್ಕೆ ನೀಡಿದ ಆದ್ಯತೆಯು ಶಾಸಕಾಂಗದಲ್ಲಿ ಮಹಿಳಾ ನಾಯಕತ್ವದ ಮಹತ್ವವನ್ನು ತೋರಿಸುತ್ತದೆ. ಮಹಿಳೆಯರು ಕೇವಲ ಸಂಖ್ಯಾತ್ಮಕ ಪ್ರಾತಿನಿಧ್ಯವನ್ನು ಹೆಚ್ಚಿಸುವುದಲ್ಲದೆ, ಮಹಿಳೆಯರು, ಮಕ್ಕಳು ಮತ್ತು ಗ್ರಾಮೀಣ ಕುಟುಂಬಗಳಿಗೆ ಸಂಬಂಧಿಸಿದ ವಿಷಯಗಳನ್ನು ನೀತಿ ರೂಪಿಸುವಿಕೆಯಲ್ಲಿ ಪ್ರಮುಖವಾಗಿ ಪ್ರಸ್ತಾಪಿಸುವ ಸಾಧ್ಯತೆಯೂ ಹೆಚ್ಚಿರುತ್ತದೆ. ಹೊಸ ತಲೆಮಾರಿನ ಬಂಜಾರ ನಾಯಕತ್ವವು ಮೂರು ಪ್ರಮುಖ ಪರಿವರ್ತನೆಗಳನ್ನು ಸೂಚಿಸುತ್ತದೆ. ಅವುಗಳೆಂದರೆ;

- ಮೊದಲನೆಯದಾಗಿ; ಜಾತಿ–ಆಧಾರಿತ ರಾಜಕೀಯದಿಂದ ಅಭಿವೃದ್ಧಿ–ಆಧಾರಿತ ರಾಜಕೀಯದತ್ತ ಕ್ರಮೇಣ ಬದಲಾವಣೆ ಕಂಡುಬರುತ್ತಿದೆ.

- ಎರಡನೆಯದಾಗಿ; ವೃತ್ತಿಪರ ಶಿಕ್ಷಣ ಮತ್ತು ಸಾರ್ವಜನಿಕ ನೀತಿ ಪರಿಣತಿ ರಾಜಕೀಯ ನಾಯಕತ್ವದ ಪ್ರಮುಖ ಅರ್ಹತೆಯಾಗಿ ಹೊರಹೊಮ್ಮುತ್ತಿದೆ.
- ಮೂರನೆಯದಾಗಿ, ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಹೆಚ್ಚಾಗುತ್ತಿರುವುದು ನಾಯಕತ್ವವನ್ನು ಹೆಚ್ಚು ಸಮಗ್ರ ಮತ್ತು ಬಹುಮುಖವಾಗಿಸುತ್ತಿದೆ.

ಈ ಬದಲಾವಣೆಗಳು ಬಂಜಾರ ಸಮುದಾಯದ ರಾಜಕೀಯವು ಕೇವಲ ಗುರುತಿನ ರಾಜಕೀಯಕ್ಕೆ ಸೀಮಿತವಾಗದೆ, ಉತ್ತಮ ಆಡಳಿತ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದತ್ತ ಸಾಗುತ್ತಿರುವುದನ್ನು ಸೂಚಿಸುತ್ತವೆ. ಡಾ.ಅವಿನಾಶ್ ಯು.ಜಾಧವ್ ಮತ್ತು ಶಾರದಾಪುರಣ್ ನಾಯಕ್ ಅವರ ನಾಯಕತ್ವವು ಬಂಜಾರ ಸಮುದಾಯದ ರಾಜಕೀಯದಲ್ಲಿ ನಡೆಯುತ್ತಿರುವ ಗುಣಾತ್ಮಕ ರೂಪಾಂತರವನ್ನು ಪ್ರತಿಬಿಂಬಿಸುತ್ತದೆ. ಡಾ.ಅವಿನಾಶ್ ಯು.ಜಾಧವ್ ಅವರ ನಾಯಕತ್ವವು ಶಿಕ್ಷಣ, ವೃತ್ತಿಪರ ಪರಿಣತಿ ಮತ್ತು ನೀತಿ–ಆಧಾರಿತ ಆಡಳಿತವನ್ನು ಒತ್ತಿಹೇಳಿದರೆ, ಶಾರದಾಪುರಣ್ ನಾಯಕ್ ಅವರ ರಾಜಕೀಯ ಪಯಣವು ಛೇದಕ ನಾಯಕತ್ವ, ಮಹಿಳಾ ಸಬಲೀಕರಣ ಮತ್ತು ಸಮಗ್ರ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ.

**ಪ್ರಸ್ತುತ ವಿದ್ಯಮಾನಗಳು: ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ಅಸ್ತಿತ್ವ, ಪ್ರಾತಿನಿಧ್ಯ ಮತ್ತು ಮೀಸಲಾತಿ ಕುರಿತ ಸಮಕಾಲೀನ ಸವಾಲುಗಳು–2023–2026**

2023 ರಿಂದ 2026ರ ಈ ಅವಧಿಯು ಕರ್ನಾಟಕದಲ್ಲಿ ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ನಾಯಕತ್ವಕ್ಕೆ ಹೊಸ ಸವಾಲುಗಳನ್ನು ತಂದೊಡ್ಡಿದ ಅವಧಿಯಾಗಿದೆ. ಈ ಅವಧಿಯಲ್ಲಿ ಮೀಸಲಾತಿ ನೀತಿಗಳು, ಸಾಮಾಜಿಕ ನ್ಯಾಯದ ಕುರಿತ ಚರ್ಚೆಗಳು, ಸಮುದಾಯದ ಅಭಿವೃದ್ಧಿ, ಉದ್ಯೋಗ ಮತ್ತು ಶಿಕ್ಷಣದ ಅವಕಾಶಗಳ ಬಗ್ಗೆ ವ್ಯಾಪಕ ಸಾರ್ವಜನಿಕ ಹಾಗೂ ರಾಜಕೀಯ ಚರ್ಚೆಗಳು ನಡೆದವು. ಇದರ ಪರಿಣಾಮವಾಗಿ ಬಂಜಾರ ಸಮುದಾಯದ ರಾಜಕೀಯ ನಾಯಕತ್ವವು ಕೇವಲ ಚುನಾವಣಾ ರಾಜಕಾರಣಕ್ಕೆ ಸೀಮಿತವಾಗದೆ, ಸಮುದಾಯದ ದೀರ್ಘಕಾಲೀನ ಹಿತಾಸಕ್ತಿಗಳನ್ನು ರಕ್ಷಿಸುವ ಜವಾಬ್ದಾರಿಯನ್ನೂ ಹೊತ್ತಿತು. ರಾಜಕೀಯ ಪ್ರಾತಿನಿಧ್ಯದ ದೃಷ್ಟಿಯಿಂದ ಬಂಜಾರ ಸಮುದಾಯದ ನಾಯಕರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಗಮನಾರ್ಹ ಸ್ಥಾನಮಾನವನ್ನು ಪಡೆದಿದ್ದರೂ, ಸಮುದಾಯದ ಯುವಜನರು ಶಿಕ್ಷಣ, ಸರ್ಕಾರಿ ಉದ್ಯೋಗ, ಕೌಶಲ್ಯಾಭಿವೃದ್ಧಿ ಹಾಗೂ ಸಮಾಜೋ–ಆರ್ಥಿಕ ಅವಕಾಶಗಳ ಬಗ್ಗೆ ಹೆಚ್ಚಿನ ನಿರೀಕ್ಷೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಈ ನಿರೀಕ್ಷೆಗಳನ್ನು ಈಡೇರಿಸುವಲ್ಲಿ ರಾಜಕೀಯ ನಾಯಕತ್ವದ ಪರಿಣಾಮಕಾರಿತ್ವವು ಪ್ರಮುಖ ಚರ್ಚೆಯ ವಿಷಯವಾಗಿದೆ. ಈ ಅವಧಿಯಲ್ಲಿ ಕರ್ನಾಟಕದಲ್ಲಿ ಮೀಸಲಾತಿ ನೀತಿಗಳ ಮರುಪರಿಶೀಲನೆ, ಸಾಮಾಜಿಕ ನ್ಯಾಯದ ಅನುಷ್ಠಾನ ಮತ್ತು ವಿವಿಧ ಸಮುದಾಯಗಳ ನಡುವಿನ ಸಂಪನ್ಮೂಲ ಹಂಚಿಕೆ ಕುರಿತ ಚರ್ಚೆಗಳು ತೀವ್ರಗೊಂಡವು. ಇಂತಹ ಬೆಳವಣಿಗೆಗಳು ಬಂಜಾರ ಸಮುದಾಯದಲ್ಲಿಯೂ ಭವಿಷ್ಯದ ಅವಕಾಶಗಳ ಕುರಿತು ಆತಂಕವನ್ನು ಉಂಟುಮಾಡಿದವು. ಶಿಕ್ಷಣ ಮತ್ತು

ಸರ್ಕಾರಿ ಉದ್ಯೋಗಗಳಲ್ಲಿ ಸಮಾನ ಅವಕಾಶಗಳ ಪ್ರಶ್ನೆಯು ಸಮುದಾಯದ ರಾಜಕೀಯ ಸಂಘಟನೆಗಳ ಪ್ರಮುಖ ಬೇಡಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಬಂಜಾರ ಸಮುದಾಯದ ರಾಜಕೀಯ ನಾಯಕರು ಎರಡು ರೀತಿಯ ಒತ್ತಡವನ್ನು ಎದುರಿಸಿದರು. ಒಂದು ಕಡೆ ಅವರು ತಮ್ಮ ರಾಜಕೀಯ ಪಕ್ಷಗಳ ನೀತಿ ಮತ್ತು ಶಿಸ್ತಿಗೆ ಬದ್ಧರಾಗಿರಬೇಕಾದ ಪರಿಸ್ಥಿತಿಯಿತ್ತು. ಮತ್ತೊಂದೆಡೆ, ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುವ ಜವಾಬ್ದಾರಿಯೂ ಅವರ ಮೇಲಿದೆ. ಇದರಿಂದ ನಾಯಕತ್ವವು ಪಕ್ಷದ ನಿಲುವು ಮತ್ತು ಸಮುದಾಯದ ನಿರೀಕ್ಷೆಗಳ ನಡುವೆ ಸಮತೋಲನ ಸಾಧಿಸಬೇಕಾದ ಸವಾಲಿನ ಪರಿಸ್ಥಿತಿ ನಿರ್ಮಾಣವಾಯಿತು. ಈ ಸನ್ನಿವೇಶವನ್ನು ಹನ್ನಾ ಪಿಟ್ಕಿನ್ ಅವರ 'ವಾಸ್ತವಿಕ ಪ್ರಾತಿನಿಧ್ಯ' ಪರಿಕಲ್ಪನೆಯ ಬೆಳಕಿನಲ್ಲಿ ವಿಶ್ಲೇಷಿಸಬಹುದು. ಶಾಸಕಾಂಗದಲ್ಲಿ ಬಂಜಾರ ಸಮುದಾಯದ ಪ್ರತಿನಿಧಿಗಳು ಸಂಖ್ಯಾತ್ಮಕವಾಗಿ ಇದ್ದರೂ, ಅವರು ತಮ್ಮ ಸಮುದಾಯದ ಎಲ್ಲಾ ಬೇಡಿಕೆಗಳನ್ನು ನೀತಿಗಳಾಗಿ ಪರಿವರ್ತಿಸಲು ಯಾವಾಗಲೂ ಸಮರ್ಥರಾಗುವುದಿಲ್ಲ. ಪಕ್ಷದ ಶಿಸ್ತು, ಮೈತ್ರಿ ರಾಜಕೀಯ, ಸಚಿವ ಸಂಪುಟದ ಸಾಮೂಹಿಕ ಹೊಣೆಗಾರಿಕೆ ಹಾಗೂ ಆಡಳಿತಾತ್ಮಕ ನಿರ್ಬಂಧಗಳು ಅವರ ಸ್ವತಂತ್ರ ಕಾರ್ಯಚಟುವಟಿಕೆಯನ್ನು ಮಿತಿಗೊಳಿಸುತ್ತವೆ. ಈ ಹಿನ್ನೆಲೆಯಲ್ಲಿ 2023–2026ರ ಅವಧಿಯು ಬಂಜಾರ ಸಮುದಾಯದ ರಾಜಕೀಯ ನಾಯಕತ್ವದ ಶಕ್ತಿಯನ್ನೂ ಅದರ ಮಿತಿಗಳನ್ನೂ ಸಮಾನವಾಗಿ ಅನಾವರಣಗೊಳಿಸಿದೆ. ಸಮುದಾಯದ ರಾಜಕೀಯ ಪ್ರಾತಿನಿಧ್ಯವು ಗಣನೀಯವಾಗಿ ವಿಸ್ತರಿಸಿದರೂ, ಅದನ್ನು ಶಿಕ್ಷಣ, ಉದ್ಯೋಗ, ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿಯಂತಹ ಕ್ಷೇತ್ರಗಳಲ್ಲಿ ಪರಿಣಾಮಕಾರಿ ನೀತಿ ಫಲಿತಾಂಶಗಳಾಗಿ ಪರಿವರ್ತಿಸುವುದು ಇನ್ನೂ ಪ್ರಮುಖ ಸವಾಲಾಗಿಯೇ ಉಳಿದಿದೆ.

**ಉಪಸಂಹಾರ:** 2008 ರಿಂದ 2026ರವರೆಗಿನ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಂಜಾರ (ಲಂಬಾಣಿ) ಸಮುದಾಯದ ರಾಜಕೀಯ ಪಯಣವು ಕೇವಲ ಸಂಖ್ಯಾತ್ಮಕ ಬೆಳವಣಿಗೆಯಷ್ಟೇ ಅಲ್ಲ, ಸಾಮಾಜಿಕ ಗುರುತು, ರಾಜಕೀಯ ಸಂಘಟನೆ, ಸಾಂಸ್ಥಿಕ ಅವಕಾಶಗಳು ಮತ್ತು ಪ್ರಜಾಪ್ರಭುತ್ವ ವಿಸ್ತರಣೆಯೊಂದಿಗೆ ಬೆಸೆದ ಬಹುಆಯಾಮಿಕ ಪ್ರಕ್ರಿಯೆಯಾಗಿದ್ದು ಸ್ಪಷ್ಟವಾಗುತ್ತದೆ. ಈ ಅವಧಿಯಲ್ಲಿ ಪಿ.ರಾಜೀವ್, ಪ್ರಭು ಚವಾಣ್, ಪಿ.ಟಿ.ಪರಮೇಶ್ವರ ನಾಯಕ್, ರುದ್ರಪ್ಪ ಲಮಾಣಿ, ಡಾ.ಉಮೇಶ್ ಜಾಧವ್, ಡಾ.ಅವಿನಾಶ್ ಯು.ಜಾಧವ್ ಮತ್ತು ಶಾರದಾಪುರಣ್ ನಾಯಕ್ ಅವರಂತಹ ನಾಯಕರು ತಮ್ಮ ವಿಭಿನ್ನ ಸಾಮಾಜಿಕ ಹಿನ್ನೆಲೆ, ವೃತ್ತಿಪರ ಅನುಭವ ಮತ್ತು ರಾಜಕೀಯ ಕಾರ್ಯತಂತ್ರಗಳ ಮೂಲಕ ಸಮುದಾಯದ ರಾಜಕೀಯ ಗೋಚರತೆಯನ್ನು ವಿಸ್ತರಿಸುವಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಈ ಅಧ್ಯಯನವು ಹನ್ನಾ ಪಿಟ್ಕಿನ್ ಅವರ 'ವರ್ಣನಾತ್ಮಕ ಪ್ರಾತಿನಿಧ್ಯ' ಮತ್ತು 'ವಾಸ್ತವಿಕ ಪ್ರಾತಿನಿಧ್ಯ' ಪರಿಕಲ್ಪನೆಗಳ ನಡುವಿನ ಅಂತರವನ್ನು ಸ್ಪಷ್ಟಪಡಿಸುತ್ತದೆ. ಬಂಜಾರ ಸಮುದಾಯದ ಜನಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿರುವುದು ಸಮುದಾಯದ ರಾಜಕೀಯ ಸಬಲೀಕರಣದ ಸೂಚಕವಾಗಿದ್ದರೂ, ಅದು ಸ್ವಯಂಚಾಲಿತವಾಗಿ ಸಮಾಜೋ–ಆರ್ಥಿಕ ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಆರೋಗ್ಯ, ಭೂಸ್ವಾಮ್ಯ ಮತ್ತು

ಆಡಳಿತಾತ್ಮಕ ಪಾಲ್ಗೊಳ್ಳುವಿಕೆಗಳಲ್ಲಿ ಸಮಾನ ಪ್ರಗತಿಯನ್ನು ಖಚಿತಪಡಿಸುವುದಿಲ್ಲ. ಪರಿಣಾಮಕಾರಿ ವಾಸ್ತವಿಕ ಪ್ರಾತಿನಿಧ್ಯ ಸಾಧಿಸಲು ರಾಜಕೀಯ ಇಚ್ಛಾಶಕ್ತಿ, ಆಡಳಿತಾತ್ಮಕ ಬದ್ಧತೆ ಮತ್ತು ಸಮಗ್ರ ಅಭಿವೃದ್ಧಿ ನೀತಿಗಳು ಅಗತ್ಯವಾಗಿರುತ್ತದೆ. ಸಮಕಾಲೀನ ಕರ್ನಾಟಕದಲ್ಲಿ ಮೀಸಲಾತಿ ನೀತಿಗಳು, ಸಾಮಾಜಿಕ ನ್ಯಾಯ ಮತ್ತು ಸಂಪನ್ಮೂಲಗಳ ಸಮಾನ ಹಂಚಿಕೆ ಕುರಿತ ಚರ್ಚೆಗಳು ರಾಜಕೀಯ ಪ್ರಾತಿನಿಧ್ಯದ ಗುಣಮಟ್ಟವನ್ನು ಮರುಪರಿಶೀಲಿಸುವ ಅಗತ್ಯವಿರುವುದನ್ನು ಒತ್ತಿಹೇಳುತ್ತವೆ. ಈ ಬೆಳವಣಿಗೆಗಳು ಶೋಷಿತ ಸಮುದಾಯದ ನಾಯಕತ್ವವು ಪಕ್ಷದ ಶಿಸ್ತು, ಆಡಳಿತಾತ್ಮಕ ಮಿತಿಗಳು, ಚುನಾವಣಾ ರಾಜಕೀಯ ಮತ್ತು ಸಮುದಾಯದ ನಿರೀಕ್ಷೆಗಳ ನಡುವೆ ಸಮತೋಲನ ಸಾಧಿಸಬೇಕಾದ ಸಂಕೀರ್ಣ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂಬುದನ್ನು ಸೂಚಿಸುತ್ತವೆ. ಇದರೊಂದಿಗೆ, ರಾಜಕೀಯ ಯಶಸ್ಸನ್ನು ಕೇವಲ ಚುನಾವಣಾ ಜಯದಿಂದ ಅಳೆಯುವುದು ಸಾಕಾಗದೆ, ಸಮುದಾಯದ ದೀರ್ಘಕಾಲೀನ ಹಿತಾಸಕ್ತಿಗಳನ್ನು ನೀತಿ ರೂಪಿಸುವಿಕೆಯಲ್ಲಿ ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂಬುದು ಸಮಾನ ಮಹತ್ವ ಪಡೆದಿದೆ. ಈ ಅಧ್ಯಯನವು ಬಂಜಾರ ಸಮುದಾಯದ ಹೊಸ ತಲೆಮಾರಿನ ನಾಯಕತ್ವವು ಜಾತಿ ಅಸ್ಮಿತೆ ರಾಜಕಾರಣಕ್ಕೆ ಸೀಮಿತವಾಗದೆ, ವೃತ್ತಿಪರತೆ, ಶಿಕ್ಷಣ, ಮಹಿಳಾ ನಾಯಕತ್ವ, ಯುವಜನರ ಸಬಲೀಕರಣ ಮತ್ತು ಅಭಿವೃದ್ಧಿ–ಆಧಾರಿತ ಆಡಳಿತದತ್ತ ಸಾಗುತ್ತಿರುವ ಮಹತ್ವದ ಪರಿವರ್ತನೆಯನ್ನು ಗುರುತಿಸಿದೆ. ಈ ಪ್ರಗತಿ ಸಮುದಾಯದ ರಾಜಕೀಯವನ್ನು ಹೆಚ್ಚು ಸಮಗ್ರ, ಉತ್ತರದಾಯಿತ್ವಯುತ ಮತ್ತು ನೀತಿ–ಕೇಂದ್ರಿತ ದಿಕ್ಕಿನಲ್ಲಿ ರೂಪಿಸುವ ಸಾಧ್ಯತೆ ಹೊಂದಿದೆ.

**ಗ್ರಂಥಸೂಚಿ**


- Dodamani.M.S, *Political Representation and Leadership Development among SC/ST Communities in Karnataka*, Research Directions
- Fouquet, Sébastien and Klaus Brummer, Profiling Populist Foreign Policy Makers, *Journal of International Relations and Development*, Vol-26, No-01, 2023
- Gerring, John, Connor T.Jerzak and Erzen Öncel, The Composition of Descriptive Representation, *American Political Science Review*, Vol-118, No-01, 2024
- Government of Karnataka, *Official Notification and Proceedings on the Implementation of Scheduled Caste Internal Reservation (Justice H.N.Nagamohan Das Committee Report).* Department of Information and Public Relations, Government of Karnataka, 2026
- Gupta, Dipankar, Caste and Politics: Identity over System, *Annual Review of Anthropology*, Vol-34, 2005
- Hansen, Elizabeth.R and Christopher J.Clark, Diversity in Party Leadership in State Legislatures, *State Politics & Policy Quarterly*, Vol-20, No-04, 2020

- Körösényi, András. Political Representation in Leader Democracy, *Government and Opposition*, Vol-40, No-03, 2005
- Lowande, Kenneth, Melissa Ritchie and Erin Lauterbach, Descriptive and Substantive Representation in Congress, *American Journal of Political Science*, Vol.-63, No-03, 2019
- Mansbridge, Jane, A Selection Model of Political Representation, *The Journal of Political Philosophy*, Vol-17, No-04, 2009
- Morrell, Kevin and Jean Hartley, A Model of Political Leadership, *Human Relations*, Vol-59, No-04, 2006
- Nilsen, Alf Gunvald and Srila Roy, New Subaltern Politics: Reconceptualizing Hegemony and Resistance in Contemporary India. *Critical Asian Studies*, Vol-47, No- 01, 2015
- Pankaj, Ashok.K and Ajay Kumar Pandey, *Dalits, Subalternity and Social Change in India*. Routledge, 2019
- Verma, Vidhu, A Crisis of Representation: Interests, Identities and Politics, *Journal of Social Inclusion Studies*, Vol-05, No-01, 2019
- Wängnerud, Lena, Women in Parliaments: Descriptive and Substantive Representation, *Annual Review of Political Science*, Vol-12, 2009